# ನಾಯಿ ಬಂದದಪ್ಪ ಅಣ್ಣ ಅತ್ತಲಾಗಿರಿ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 320
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 328
3. **Note:** Lyrics in both the above references are same. Singer has followed these lyrics.

ರಾಗ: ಕೇದಾರಗೌಳ ತಾಳ: ಅಟ

ನಾಯಿ ಬಂದದಪ್ಪ ಅಣ್ಣ ಅತ್ತಲಾಗಿರಿ || ಪ ||

ನಾಯಿ ಅಂದರೆ ನಾಯಿಯಲ್ಲ
ಮಾನವ ಜನ್ಮದ ಹೀನ ನಾಯಿ || ಅಪ ||

ಕೊಟ್ಟ ಸಾಲವ ಕೊಡದವ ನಾಯಿ,
ಇಟ್ಟ ಭಾಷೆಯ ತಪ್ಪುವ ನಾಯಿ
ಕಟ್ಟೆ ಮೇಲೆ ಕುಳಿತುಕೊಂಡು
ಅಟ್ಟಹಾಸದಿ ಬಗುಳುವ ನಾಯಿ || 1 ||

ಕೊಟ್ಟು ಕುದಿಯುವೋ ಕೆಟ್ಟ ನಾಯಿ,
ಇಟ್ಟ ಅನ್ನವ ಹಂಗಿಪ ನಾಯಿ
ಪುಟ್ಟಿ ಮಾತೆ ಗರ್ಭದಲ್ಲಿ
ಕೆಟ್ಟ ಕೃತ್ಯವ ಮಾಳ್ಪವ ನಾಯಿ || 2 ||

ಪಟ್ಟ ಸ್ತ್ರೀಯಳ ಬಿಟ್ಟವ ನಾಯಿ,
ಬಿಟ್ಟ ಸ್ತ್ರೀಯಳ ಆಳ್ವವ ನಾಯಿ
ದಿಟ್ಟ ಶ್ರೀ ಪುರಂದರ ವಿಠಲ ರಾಯನ ಮನ
ಮುಟ್ಟಿ ಭಜಿಸದೆ ಹೋದವ ನಾಯಿ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ನಾಯಿಯೆಂದರೆ ಮನುಷ್ಯನಾಗಿದ್ದೂ ನಾಯಿಯ ಬಾಳನ್ನು ಬಾಳುತ್ತಿರುವವನು; 'ನಾಯಿಬಾಳು,' ಎನ್ನುತ್ತಾರೆ. ಅವನನ್ನು ಹತ್ತಿರ ಸೇರಿಸಬಾರದು; ಅವನಿಂದ ದೂರವಿರಬೇಕು ಎಂದು ಇಲ್ಲಿನ ಉಪದೇಶ. ಮನುಷ್ಯನು ನಾಯಿಯಾಗುವುದು ಹೇಗೆ ಎನ್ನುವ ಒಕ್ಕಣೆಯೂ ಇಲ್ಲಿದೆ. 'ನಾಯಿ' ಎಂಬ ಮಾತಿಗೆ ವ್ಯವಹಾರದಲ್ಲಿ ಅಷ್ಟು ಹೀನಾಯವಿರುವುದು ಏಕೆಂಬ ವಿವರಣೆಯೇ ಇದು.

**Classification:** Mundige
**Ankita:** sri purandara vittala
**Location:** NA
**Category:** Jeevanoddhara
**Sub-Category:** nayi, anna, nara, janma, tayi, hennu, bhajane,
**Pravachana:** Vid. Aayanur Madhusudhanacharya
**Explanation:** NA